ಆದರೆ ಈಗ! ಬಹು ರಾಷ್ಟ್ರೀಯ ಕಂಪೆನಿಯೊಂದರ ಮಾನವಿಕ ಸಂಬಂಧಗಳ ಖಾತೆಯ ಮುಖ್ಯಸ್ಥಳಾದ ಆಕೆ ಇಲ್ಲಿ ಅನಾಥಳಂತೆ ಅಂಗಳದ ಮೂಲೆಯ ಗುಡಿಸಲಿನಂತಹ ಕೋಣೆಯಲ್ಲಿ ದಿನ ರಾತ್ರಿಗಳನ್ನೆಲ್ಲ ಕಳೆಯಬೇಕು. ಈ ಪ್ರದೇಶಕ್ಕೇ ಹೊಸಬಳಾದ ಅವಳ ಧೈರ್ಯಕ್ಕಾಗಿಯಾದರೂ ತನ್ನನ್ನು ಅವಳಿದ್ದಲ್ಲಿಗೆ ಹೋಗಲು ಬಿಟ್ಟಾರು ಎನ್ನುವ ನಂಬಿಕೆಯೂ ಇರಲಿಲ್ಲ ಅವನಿಗೆ.

ಮದುವೆಯ ಗಡಿ ಬಿಡಿ ಸಮಾರಂಭಗಳನ್ನೆಲ್ಲ ಅತಿಥಿಗಳಂತೆ ದೂರದಿಂದಲೇ ನೋಡಿದ್ದರು. ಅಣ್ಣಂದಿರು ಅವನ ಹತ್ತಿರಕ್ಕೆ ಬರುತ್ತಿದ್ದುದು 'ಮದುವೆ ಮಾಡಿಸಿದವರಿಗೆ ದಕ್ಷಿಣೆ ಕೊಡಬೇಕು. ದೇವರ ಕಾರ್ಯ ಮಾಡಿಸಿದ ಪುರೋಹಿತರು ಈ ಪ್ರದೇಶದಲ್ಲೇ ಘಟಾನುಘಟಿಗಳು. ಅವರಿಗೆ ಕನಿಷ್ಟ ಐದು ಸಾವಿರವಾದರೂ ಕೊಡಬೇಕು' ಎನ್ನುತ್ತ ದುಡ್ಡಿಗೆ ಕೈಚಾಚಲು ಮಾತ್ರ. ಹೆಂಡತಿಯನ್ನಂತೂ ಕೇಳಿದವರೇ ಇಲ್ಲ. ಎಲ್ಲರ ಊಟವಾದ ನಂತರ ಕೆಲಸದವರಿಗೆ ಬಡಿಸುವಾಗ ಆಕೆಗೂ ದೂರದಲ್ಲೊಂದು ಎಲೆ ಹಾಕಿ ಬಡಿಸುತ್ತಿದ್ದರು. 'ನೀನು ಉಂಡ ಎಲೆಯನ್ನು ನೀನೇ ತೆಗೆದು ಎಂಜಲು ಸಾರಿಸಬೇಕು' ಎನ್ನುವ ಎಚ್ಚರದೊಂದಿಗೆ. ಆಗೆಲ್ಲ ಹೆಂಡತಿಯ ಮುಖ ನೋಡಲು ಹೆದರಿದ ಗಂಡ ತನ್ನ ಅಸಹಾಯಕ ಮುಖವನ್ನು ಬೇರೆಡೆಗೆ ತಿರುಗಿಸುತ್ತಿದ್ದ.

ಎಲ್ಲ ಮುಗಿದು ತಂಗಿಯನ್ನು ಕಳುಹಿಸಿಕೊಡುವಾಗ ಆರ್ತಳಾಗಿ ನೋಡುತ್ತಿದ್ದ ಆ ತಂಗಿಯನ್ನು ತಲೆ ಸವರಿ ಸಮಾಧಾನದ ಮಾತುಗಳನ್ನು ಹೇಳಬೇಕೆಂದುಕೊಂಡವನಿಗೆ ತಂಗಿಯ ಹತ್ತಿರ ಹೋಗಲಿಕ್ಕೇ ಬಿಟ್ಟಿರಲಿಲ್ಲ. ಅದರಲ್ಲಿಯೂ ಎಲ್ಲರಿಂದ ತಪ್ಪಿಸಿಕೊಂಡು ಬಂದ ಆಕೆ ಇವನ ಕಾಲುಮುಟ್ಟಿ ನಮಸ್ಕರಿಸಿ ಪಕ್ಕದಲ್ಲಿಯೇ ನಿಂತಿದ್ದ ಇವನ ಹೆಂಡತಿಯ ಕಾಲಿಗೆ ನಮಸ್ಕರಿಸಬೇಕೆಂದು ಬಗ್ಗಿದರೆ ಧಾವಿಸಿ ಬಂದ ಅಣ್ಣ ಅವಳ ರಟ್ಟೆ ಹಿಡಿದು ಎಳೆದಿದ್ದ. 'ಅಲ್ಲ ಆ ಜಾತಿಯಿಲ್ಲದ ಜಾತಿಯವಳ ಕಾಲು ಮುಟ್ಟುತ್ತೀಯಾ....ಆ ಮೇಲೆ ಸ್ನಾನ ಮಾಡಬೇಕಾದೀತು...' ಎಂದಿದ್ದ. ನಾದಿನಿಯ ಕಣ್ಣಿನ ಬಿಸಿ ಹನಿ ಆಗಲೇ ಕಾಲ ಮೇಲೆ ಬಿದ್ದಿದ್ದ ಇವನ ಹೆಂಡತಿ ತುಂಬಿಕೊಳ್ಳುತ್ತಿದ್ದ ತನ್ನ ಕಣ್ಣು ಯಾರಿಗೂ ಕಾಣಿಸುವುದು ಬೇಡ ಎಂದು ಮುಖ ತಿರುವಿದ್ದಳು. ವಾಪಾಸು ಪ್ರಯಾಣ ಮಾಡುವಾಗ 'ಅಲ್ಲ, ಜಾತಿಯಿಲ್ಲದ ಜಾತಿಯವಳನ್ನು ಮುಟ್ಟಿದರೆ ಸ್ನಾನ ಮಾಡಬೇಕು. ಆದರೆ ಅವಳು ಕಳುಹಿಸಿದ ಹಣ ಮುಟ್ಟಿದ್ದಕ್ಕೆ ಏನು ಪರಿಹಾರ...' ಎಂದು ಆಕೆ ಕೇಳಿದರೆ ಇವನ ಹತ್ತಿರ ಉತ್ತರವಿರಲಿಲ್ಲ. ಆಕೆಗೆ ಇನ್ನೂ ಒತ್ತಿ ಕುಳಿತು ಆಕೆಯ ಕೈ ಹಿಡಿದು ಧೈರ್ಯ ತುಂಬಿಸುವವನಂತೆ ಅದುಮಿದ್ದ. ಮದುವೆಗೆ ಇವನು ಕಳುಹಿಸಿದ್ದರಲ್ಲಿ ಅರ್ಧಕ್ಕಿಂತ ಹೆಚ್ಚು ಅವಳ ಸಂಬಳದ ಹಣ.

*****

ಅವರ ಮದುವೆಯಾದ ಮಾರನೆ ವರ್ಷವೇ ಅಪ್ಪನ ಕಾಯಿಲೆಯೆಂದು ಹೇಳಿ ಸಾವಿರ ಸಾವಿರ ಸೆಳೆದಿದ್ದರು ಅವನಿಂದ. ಪ್ರಾರಂಭದ ದಿನಗಳಲ್ಲಿ ಸಾವಿರವಿದ್ದುದನ್ನು ಕಾಯಿಲೆ ಉಲ್ಬಣಿಸಿದಾಗ ಲಕ್ಷಕ್ಕೇರಿಸಿದ್ದರು. ಹೆಂಡತಿಯೂ ಹೇಳಿದ್ದಳು 'ತಂದೆಯಲ್ಲವೇ. ಇಲ್ಲ ಎನ್ನಬೇಡಿ. ನಿಮ್ಮ ಅಕೌಂಟಿನಲ್ಲಿ ಇಲ್ಲದಿದ್ದರೆ ಹೇಳಿ. ನನ್ನ ಸಂಬಳದ ಮೇಲೆ ಮುಂಗಡ ತೆಗೆದು ಕೊಡುತ್ತೇನೆ' ಎಂದು ಹೇಳಿ ಕೊಟ್ಟಿದ್ದಳು. ಅಷ್ಟೆಲ್ಲ ಆಗಿಯೂ ಅಪ್ಪ ಸತ್ತ ಸುದ್ದಿ ಅವನಿಗೆ ತಿಳಿದದ್ದು ಸತ್ತ ಹನ್ನೊಂದನೇ ದಿನ. ಶುದ್ಧಕ್ಕೂ ಬರದ ಹಾಗೆ ಬೇರೆ ಯಾರ ಮೂಲಕವೋ ಹೇಳಿಸಿದ್ದರು. ಕೈಯ್ಯಲ್ಲಿದ್ದ ಹಣವನ್ನೆಲ್ಲ ಅಪ್ಪನ ಕಾಯಿಲೆಗೆಂದು ಕಳುಹಿಸಿ ಕೈ ಖಾಲಿ ಮಾಡಿಕೊಂಡ ಅವ ವಿಮಾನಕ್ಕೆ ಕೊಡಲು ದುಡ್ಡಿಲ್ಲದೆ ಟ್ರೈನು ಬಸ್ಸುಗಳನ್ನು ಬದಲಾಯಿಸಿ ಎರಡು ದಿನಗಳ ಪ್ರಯಾಣ ಮುಗಿಸಿ ಮನೆಗೆ ಬರುವಾಗ ವೈಕುಂಠದ ದಿನ. ಅದೂ ಮಧ್ಯಾಹ್ನ ಕಳೆದಿತ್ತು. ಎಲ್ಲ ಭೂರಿ ಭೋಜನವನ್ನು ಮುಗಿಸಿ ಪಟ್ಟಾಂಗ ಹೊಡೆಯುತ್ತಿದ್ದರು. ಅಣ್ಣಂದಿರು ಪಟ್ಟಾಗಿ ಊಟ ಹೊಡೆದು ತಾಂಬೂಲ ಸವಿಯುತ್ತ ಅಂದಿನ